ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,
ನೃಪತುಂಗ ರಸ್ತೆ, ಬೆಂಗಳೂರು – 560 001.

ಸಂಖ್ಯೆ:ಸಿ8[2]ಶಾಶಿಅ:ಹೊಪ್ರೌಶಾಅ:202/2010–11 ದಿನಾಂಕ: 02–04–2011

ನಮೂನೆ–2

[ನಿಯಮ 3 ಉಪನಿಯಮ 5(ಬಿ)

ಪ್ರಮಾಣ ಪತ್ರ ಸಂಖ್ಯೆ: 22/2011–12

ಬಿಸ್ಮಿಲ್ಲಾ ವಿದ್ಯಾಸಂಸ್ಥೆ, (ರಿ) ಬಿಸ್ಮಿಲ್ಲಾ ನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029, ಇವರ ಗೌವರ್ನಿಂಗ್ ಕೌನ್ಸಿಲ್‌ನ ಈ ಶಿಕ್ಷಣ ಸಂಸ್ಥೆಯು ಹೊಸ ಪ್ರೌಢಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ 1995] ಸೆಕ್ಷನ್ 31ರಂತೆ ದಿನಾಂಕ: 02–04–2011 ರಂದು ಈ ಮೇಲೆ ನಮೂದಿಸಿರುವ ಶಿಕ್ಷಣ ಸಂಸ್ಥೆಗೆ 2011–12ನೇ ಸಾಲಿನಿಂದ ಹೊಸ ಆಂಗ್ಲ ಮಾಧ್ಯಮ ಪ್ರೌಢಶಾಲೆ ಪ್ರಾರಂಭಿಸಲು ಮಂಜೂರಾತಿ ನೀಡಿ ನೊಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | |
|---|---|
| 1) ಕ್ರಮ ಸಂಖ್ಯೆ: | : 22/2011–12 |
| 2) ಶಾಲೆಯ ಹೆಸರು ಮತ್ತು ವಿಳಾಸ | : ಬಿ. ಇ. ಟಿ ಆಂಗ್ಲ ಪ್ರೌಢಶಾಲೆ,<br>16ನೇ ಮುಖ್ಯ ರಸ್ತೆ, 17ನೇ ಎ ಅಡ್ಡ ರಸ್ತೆ, ಮದೀನಾ ನಗರ,<br>ಬಿ. ಟಿ. ಎಂ. 2ನೇ ಹಂತ, ಬೆಂಗಳೂರು–560 029 |
| 3) ಅನುಮತಿ ನೀಡಿದ ತರಗತಿ | : 8ನೇ ತರಗತಿ, 9ನೇ ತರಗತಿ, 10ನೇ ತರಗತಿ |
| 4) ಪ್ರಾರಂಭಿಸಬೇಕಾದ ತರಗತಿಗಳು | : 8ನೇ ತರಗತಿ, 9ನೇ ತರಗತಿ, 10ನೇ ತರಗತಿ.<br>[ಶಾಶ್ವತ ಅನುದಾನರಹಿತವಾಗಿ] |
| 5) ಶೈಕ್ಷಣಿಕ ವರ್ಷ | : 2011–12 2012–13 2013–14 |
| 6) ಅನುಮತಿ ನೀಡಿದ ಮಾಧ್ಯಮ | : ಆಂಗ್ಲ ಮಾಧ್ಯಮ |
| 7) ಶುಲ್ಕ ಪಾವತಿ ಮಾಡಿರುವುದು | : ರೂ. 10,000/–<br>ಡಿ.ಡಿ.ನಂ:558247, ದಿ: 29–10–2010 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 22/2011–12 ಪುಟ ಸಂಖ್ಯೆ 68 ವಾಲ್ಯೂಂ ಸಂಖ್ಯೆ: 09 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ.

1) ಈ ನೋಂದಾವಣೆಯ ನಿಯಮ 3[5][4]ಕ್ಕೆ ಒಳಪಟ್ಟಿರುತ್ತದೆ.
2) ಗೌವರ್ನಿಂಗ್ ಕೌನ್ಸಿಲ್ ಇವರು ನಿಯಮ 4[4]ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3) ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4) ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5) ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6) ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
7) ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 [ಕರ್ನಾಟಕ ಆಕ್ಟ್ ಸಂಖ್ಯೆ:1:96] ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
8) ಈ ಪ್ರೌಢಶಾಲಾ ನೊಂದಾವಣೆಯಂತೆ ಸರ್ಕಾರಿ ಅಧಿಸೂಚನೆ ಸಂ:ಇಡಿ:175:ಪಿಎಂಸಿ:95, ದಿ:07–09–1998 ಮತ್ತು ದಿ:29–12–1998ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 10–00 ಛಾಪಾ ಕಾಗದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

*ಸಂಖ್ಯೆ:ಸಿ8[2]ಶಾಶಿಅ:ಹೊಪ್ರಾಶಾಅ:198/2010-11*

9) ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

10) ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.

11) ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ಕನಿಷ್ಠ ಹಾಜರಾತಿ 25 ಇರತಕ್ಕದ್ದು.

12) ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

13) ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8ರ ಅಡಿಯಲ್ಲಿ ಉಪಬಂಧ 36-39ರಂತೆ ನೊಂದಾಯಿಸಿದ ಎಲ್ಲಾ ಶಾಲೆಗಳ ಮಾನ್ಯತೆ ಹಾಗೂ ತಾತ್ಕಾಲಿಕ ಮಾನ್ಯತೆ ವ್ಯಾಪ್ತಿಗೆ ಬರುವುದು.

14) ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

15) ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.

16) ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

17) ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಮೂರು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗೇ ರದ್ದಾಗುವುದು.

18) ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.

19) ಪ್ರಥಮ ಮಾನ್ಯತೆಗಾಗಿ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು, ಉಪನಿರ್ದೇಶಕರು ಶಿಕ್ಷಣ ಕಾಯ್ದೆ ಮತ್ತು ಸರ್ಕಾರದ ಆದೇಶ ದಿನಾಂಕ:30-09-2007ರ ಅನುಬಂಧ-3ರ ಚೆಕ್‌ಲಿಸ್ಟ್‌ನಲ್ಲಿ ಮಾಹಿತಿ ಪಡೆದು ಈ ಆಧಾರದ ಮೇಲೆ ಶಾಲೆ ಪ್ರಾರಂಭಿಸಿದ ಮೂರು ತಿಂಗಳೊಳಗೆ ಕಡ್ಡಾಯವಾಗಿ ಪ್ರಥಮ ಮಾನ್ಯತೆ ನೀಡುವುದು, ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದಿದ್ದಲ್ಲಿ ನೋಂದಣಿ ತಂತಾನೆ ರದ್ದಾಗುತ್ತದೆ.

20) ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ ಬೆಂಕಿ ಬಿರುಗಾಳಿ ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

ದಿನಾಂಕ: 02-04-2011
ಸ್ಥಳ : ಬೆಂಗಳೂರು

02/04/11
ಆಯುಕ್ತರು
ಹಾಗೂ ನೊಂದಣಿ ಅಧಿಕಾರಿ
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ:

1) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ
3) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ,
4) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ವಲಯ
5) ಕಾರ್ಯದರ್ಶಿಗಳು, *ಬಿಸ್ಮಿಲ್ಲಾ ವಿದ್ಯಾಸಂಸ್ಥೆ, (ರಿ) ಬಿಸ್ಮಿಲ್ಲಾ ನಗರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029,*
6) ಕಛೇರಿ ಪ್ರತಿ.

::ಬೆಂಗಳೂರು ನಗರ ಜಿಲ್ಲಾ ಪಂಚಾಯತ್::

ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ನಗರ ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು -2

ನಮೂನೆ-3

(1999ರ ಮಾನ್ಯತೆ ನಿಯಮ 4 ರಂತೆ)1

ಸಂಖ್ಯೆ: ಅನು3/ಮಾನ ಸಕಾಲ 08 /2013-14 ದಿನಾಂಕ 31 -07-2013

ಬಿಸ್ಮಿಲ್ಲಾ ವಿದ್ಯಾಸಂಸ್ಥೆ (ರಿ) ಬಿಸ್ಮಿಲ್ಲಾನಗರ ಬನ್ನೇರುಘಟ್ಟ ರಸ್ತೆ , ಬೆಂಗಳೂರು-560029, ಈ ಆಡಳಿತ ಮಂಡಳಿಯ ವತಿಯಿಂದ ನಡೆಸುವ ಬಿ.ಇ.ಟಿ .ಆಂಗ್ಲ ಪ್ರೌಢ ಶಾಲೆ 16ನೇ ಮುಖ್ಯ ರಸ್ತೆ, 17ನೇ ಎ. ಅಡ್ಡ ರಸ್ತೆ, ಮದೀನಾ ನಗರ ಬಿಟಿಎಂ 2ನೇ ಹಂತ ಬೆಂಗಳೂರು-560029 ಈ ಪ್ರೌಢ ಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983( ಕರ್ನಾಟಕ ಆಕ್ಟ್-1-1995 ) ಸೆಕ್ಷನ್ 36(6) ರಂತೆ ಈ ದಿನಾಂಕ 31-7-2013 ರಂದು ಕೆಳಕಂಡ ಷರತ್ತುಗಳ ಮೇಲೆ ಅನುದಾನ ರಹಿತವಾಗಿ ಮಾನ್ಯತೆಯನ್ನು ನೀಡಿದೆ.ಎಂದು ಪ್ರಮಾಣೀಕರಿಸಲಾಗಿದೆ (ಈ ಶಾಲೆಗೆ ದಾಖಲಾತಿ; ಹಾಜರಾತಿ ಕೊರತೆ ಮನ್ನಾ ಮಾಡಿ (ವಿನಾಯಿತಿ ನೀಡಿ) ಈ ಮಾನ್ಯತೆ ನೀಡಿದೆ.)

| ನೋಂದಣಿ ಸಂಖ್ಯೆ | ಶಾಲೆಯ ವಿಳಾಸ | ಈಗಾಗಲೇ ನೀಡಿರುವ ಪ್ರಾವಿಜನಲ್ ಪ್ರಮಾಣ ಪತ್ರದ ನೋಂದಣಿ ಸಂಖ್ಯೆ | ಮಾನ್ಯತೆ ನೀಡಿರುವ ಮಾಧ್ಯಮ | ಶಾಲೆ ಅನುದಾನ ಸಹಿತವೇ ರಹಿತವೇ | ಮಾನ್ಯತೆ ನೀಡಿರುವ ತರಗತಿಗಳು | ಮಾನ್ಯತೆ ನೀಡಿದ ವರ್ಷ | ಮಾನ್ಯತೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿದ ಅಧಿಕಾರಿಗಳ ಹೆಸರು/ಪದನಾಮ |
|---|---|---|---|---|---|---|---|
| 1 | 2 | 3 | | 5 | 6 | 7 | 8 |
| ಆಯುಕ್ತರು ಹಾಗೂ ನೊಂದಾಣಿ ಅಧಿಕಾರಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಪತ್ರದ ಸಂಖ್ಯೆ ಸಿ8(2) ಶಾ.ಶಿ ಅ ಹೊ.ಪ್ರೌ.ಶಾಅ 202/2010-11 ದಿನಾಂಕ 7-4-2011 ಪ್ರಮಾಣ ಪತ್ರ ಸಂಖ್ಯೆ 22/2011-12 ದಿ 7-4-2011 | ಬಿ.ಇ.ಟಿ .ಆಂಗ್ಲ ಪ್ರೌಢ ಶಾಲೆ 16ನೇ ಮುಖ್ಯ ರಸ್ತೆ, 17ನೇ ಎ. ಅಡ್ಡ ರಸ್ತೆ, ಮದೀನಾ ನಗರ ಬಿಟಿಎಂ 2ನೇ ಹಂತ ಬೆಂಗಳೂರು-560029 | - | ಆಂಗ್ಲ | ಅನುಧಾನ ರಹಿತ. | 8,9,10 ತರಗತಿಗೆ . ತಲಾ ಒಂದು ವಿಭಾಗದಂತೆ ಒಟ್ಟು 03 ವಿಭಾಗಳಗೆ | 2011-12 ನೇ ಸಾಲಿಗೆ 8 ನೇ ತರಗತಿಗೆ ಪ್ರಥಮ ಮಾನ್ಯತೆ, 2012-13ನೇಸಾಲಿನಲ್ಲಿ 8ನೇ ತರಗತಿ ಮಾನ್ಯತೆ 9ನೇತರಗತಿ ಪ್ರಥಮ ಮಾನ್ಯತೆ, 2013 -14ನೇ ಸಾಲಿನಲ್ಲಿ 8,9ನೇತರಗತಿ ಮಾನ್ಯತೆ & 10 ನೇ ತರಗತಿಗೆ ಪ್ರಥಮ ಮಾನ್ಯತೆ 2014-2015 ಸಾಲಿನಿಂದ 2015-16 ರವರೆಗೆ ಸಾಲಿನವರೆಗೆ 8,9.10ನೇ ತರಗತಿಗೆ ತಲಾ ಒಂದೊಂದು ವಿಭಾಗದತೆ ಒಟ್ಟು-3 ವಿಭಾಗಗಳಗೆ ಮಾನ್ಯತೆ | ಶ್ರೀ ಎಂ ಮುನಿರಡ್ಡಿ ಕ್ಷೇತ್ರ ಶಿಕ್ಷಣಾಧಿಕಾರಿ ಗಳು ಬೆಂಗಳೂರು ದಕ್ಷಿಣ ವಲಯ-3 ಎಲ್.ಹೆಚ್ ಮುತ್ತಯ್ಯ ವಿಷಯ ಪರಿವೀಕ್ಷಕರು ಉಪನಿರ್ದೇಶಕರ ಕಚೇರಿ ಬೆ.ದ.ಜಿಲ್ಲೆ |

ಷರತ್ತುಗಳು:-

1. ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು ಸರ್ಕಾರಿ ಮತ್ತು ಇಲಾಖಾ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

2. ನೇಮಕಾತಿಗಳನ್ನು ಸರ್ಕಾರಿ ಆದೇಶದ ಪ್ರಕಾರ ಮಾಡತಕ್ಕದ್ದು.ಈ ಈ ಶಾಲೆಗೆ ದಾಖಲಾತಿ; ಹಾಜರಾತಿ ಮನ್ನಾ ಮಾಡಿ ವಿನಾಯಿತಿ ನೀಡಿರುವಂತೆ ಈ ಮಾನ್ಯತೆ ನೀಡಿದೆ. ಮುಂದೆ ದಾಖಾಲಾತಿ ಹಾಜರಾತಿ ಉತ್ತಮ ಪಡಿಸಲು ತಿಳಿಸಿದೆ.

3. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿಹಾಜರುಪಡಿಸತಕ್ಕದ್ದು.ಹಾಗೂ. ಅವಧಿ ಮುಗಿದಿರುವ ಸ್ಥಿರನಿಧಿಯನ್ನು ನವೀಕರಿಸಿಕೊಳ್ಳಬೇಕು.

4.. ಅನುದಾನ ಸಂಹಿತೆ ಪ್ರಕಾರ ಶಾಲೆಯ ಎಲ್ಲಾ ಅವಶ್ಯಕತೆಗಳನ್ನು ಆಡಳಿತ ಮಂಡಳಿಯವರು ತಕ್ಷಣ ಪೂರೈಸಬೇಕು.

5. ಶಾಲಾ ಕಟ್ಟಡ ಬೆಂಕಿ ಹಾಗೂ ವಿದ್ಯುತ್ ಅವಘಡಗಳಿಂದ ಮುಕ್ತ ಮಾಡಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳತಕ್ಕದ್ದು.

6. ನಿಗಧಿತ ವಿದ್ಯಾರ್ಹತೆ ಹೊಂದಿದ ಶಿಕ್ಷಕರಿಂದ ಮಾತ್ರ ಬೋಧನಾ ಚಟುವಟಿಕೆಗಳನ್ನು ನಡೆಸತಕ್ಕದ್ದು. ಹಾಗೂ

7. ಮಕ್ಕಳ ರಕ್ಷಣೆ/ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ

8. ಶಾಲಾ ಕಟ್ಟಡ ನಿರ್ಮಾಣ/ಕಟ್ಟಡದ ಮೇಲೆ ಕೊಠಡಿ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳನ್ನು ಶಾಲಾ ಅವಧಿಯ ದಿನಗಳಲ್ಲಿ ಕೈಗೆತ್ತಿಕೊಳ್ಳಬಾರದು

9. ಶಾಲಾ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಅವರ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯ ಕನಿಷ್ಠ ವೇತನ ನೀಡುವುದು, ಬ್ಯಾಂಕ್ ಮೂಲಕ ವೇತನ ಪಾವತಿಸುವುದು, ಹಾಗೂ ಸೇವಾ ಭದ್ರತೆ ಒದಗಿಸುವುದು ಕಡ್ಡಾಯವಾಗಿರುತ್ತದೆ.ಮತ್ತು.ಶಾಲೆಯಲ್ಲಿಕಡ್ಡಾಯವಾಗಿ"ಅಗ್ನಿನಂದಕ"ಅಳವಡಿಸುವುದು.

. ಕಟ್ಟಡದ ಬಗ್ಗೆ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

10 ಶಿಕ್ಷಣ ಕಾಯ್ದೆಯ ಅನ್ವಯ ವಿದ್ಯಾರ್ಥಿಗಳ ಸಂಖ್ಯೆ ಇರಬೇಕು ಮತ್ತು ಇಲಾಖೆಯು ನಿಗದಿಪಡಿಸಿರುವ ಪಠ್ಯಕ್ರಮಗಳನ್ನು ಅನುಸರಿಸಬೇಕು ಹಾಗೂ ಬೋಧಿದಬೇಕು ಹಾಗೂ ಅಗತ್ಯವಾದ ಸ್ಥಳಾವಕಾಶ ,ಪಾಠೋಪಕರಣ ಪೀಠೋಪಕರಣ ಹಾಗೂ ಆಟದ ಮೈದಾನ ಇವುಗಳನ್ನು ಒದಗಿಸಬೇಕು.

11 ನಿಯಾಮಾನುಸಾರಸಂಬಂದ ಪಟ್ಟ ಪ್ರಾಧಿಕಾರಕ್ಕೆ ಆಡಿಟ್ ರಿಪೋರ್ಟ ಸಲ್ಲಿಸಿ ಅನುಮೋದನೆ ಪಡೆದಿರಬೇಕು. ಹಾಗೂ

12. ಕರ್ನಾಟಕ ಶಿಕ್ಷಣ ಕಾಯ್ದೆಯ ಅನ್ವಯ ಎಲ್ಲಾ ಮಾನ್ಯತೆ ನಿಯಮಗಳನ್ನು ಪಾಲಿಸತಕ್ಕದ್ದು ತಪ್ಪದ್ದಲ್ಲಿ ನಿಯಾಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವು

13 ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ದಾಖಲಾತಿ/ ಹಾಜರಾತಿಯನ್ನು ಉತ್ತಮಪಡಿಸಿಕೊಳ್ಳತಕ್ಕದ್ದು, ತಪ್ಪಿದ್ದಲ್ಲಿ ಮುಂದಿನ ಬಾರಿಯಿಂದ ಶಾಲೆಯನ್ನು ಮುಚ್ಚುವಂತೆ ಕ್ರಮ ಮಾಡಲಾಗುತ್ತದೆ

14..ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಅಧಿನಿಯಮದ ಪ್ರಕಾರ ಮತ್ತು ನಿಯಮನುಸಾರ ದಾಖಲಾತಿಮಾಡಿಕೊಳ್ಳತಕ್ಕದ್ದು

(ಕೆ.ಪದ್ಮಾವತಿ)
ಉಪನಿರ್ದೇಶಕರು(ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ.

31/7/13

1) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ದಕ್ಷಿಣ ವಲಯ-3

2)ಕಾರ್ಯದರ್ಶಿಗಳು ಬಿಸ್ಮಿಲ್ಲಾ ವಿದ್ಯಾಸಂಸ್ಥೆ (ರಿ) ಬಿಸ್ಮಿಲ್ಲಾನಗರ ಬನ್ನೇರುಘಟ್ಟ ರಸ್ತೆ , ಬೆಂಗಳೂರು-560029,

3)ಮುಖ್ಯೋಪಾಧ್ಯಾಯರು ಬಿ.ಇ.ಟಿ .ಆಂಗ್ಲ ಪ್ರೌಢ ಶಾಲೆ 16ನೇ ಮುಖ್ಯ ರಸ್ತೆ, 17ನೇ ಎ. ಅಡ್ಡ ರಸ್ತೆ, ಮದೀನಾ ನಗರ ಬಿಟಿಎಂ 2ನೇ ಹಂತ ಬೆಂಗಳೂರು-560029